ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಂಥ ಒಂದು ನಿಗದಿಯನ್ನ ಹಿಂದಿನ ಸರ್ಕಾರ, ಹಿಂದಿನ ಸಂಪ್ರದಾಯಕ್ಕನುಸರಿಸಿ ಮಾಡಿದೆ. ಆ ಪಟ್ಟಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ನಿವೇನಾದರೂ ಇಂಥ ವರನ್ನೂ ಸೇರಿಸಿಕೊಳ್ಳಬೇಕೆಂದು ಒಂದು ಪಟ್ಟಿ ಕೊಟ್ಟರೆ ಯೋಚನೆ ಮಾಡುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಖರ್ಚು ಮಾಡಿರತಕ್ಕದ್ದು, ಒಬ್ಬೊಬ್ಬ ಅತಿಥಿಗಳೂ ಬಂದಂಥ ಕಾಲದಲ್ಲಿ ಒಂದೊಂದು ರೀತಿ ಖರ್ಚಾಗಿದೆ. ಇದಕ್ಕೆ ಕಾರಣವೇನು ?

ಶ್ರೀ ಕೆ. ಹನುಮಂತಯ್ಯ.—ಕೆಲವು ಸಲ ಹೆಚ್ಚು ಮಂದಿಯನ್ನು ಆಹ್ವಾನಿಸಿದ್ದೆವು. ಕೆಲವು ಸಲ ಕಡಿಮೆ ಮಂದಿಯನ್ನು ಆಹ್ವಾನಿಸಿದ್ದೇವೆ. ಅದಕ್ಕೆ ಆ ರೀತಿ ಆಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಸಮಾರಂಭಗಳಲ್ಲಿ ತಿಂಡಿತೀರ್ಥದ ಏರ್ಪಾಡು ಮಾಡುವವರು ಯಾರು ? ಸರ್ಕಾರದವರೇ ನೇರವಾಗಿ ಆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಯಾವರೀತಿ ಮಾಡುತ್ತಾರೋ ಗೊತ್ತಿಲ್ಲ, ಬಹುಶಃ ರೆಸಿಡೆನ್ಸಿಯಲ್ಲಿರತಕ್ಕ ಸಿಬ್ಬಂದಿಯವರೇ ಆ ಏರ್ಪಾಡು ಮಾಡುತ್ತಿದ್ದಾರೆ ಎಂದು ಕಾಣುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ರೆಸಿಡೆನ್ಸಿಯಲ್ಲಿರತಕ್ಕ ಸಿಬ್ಬಂದಿಯವರು ಮಾಡತಕ್ಕದ್ದು ಅಷ್ಟು ಸಮರ್ಪಕವಾಗಿಲ್ಲ ಎಂಬ ಅಭಿಪ್ರಾಯ ಇದೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಈ ದಿವಸ ಅದನ್ನು ತಾವು ಹೇಳಿದ್ದೀರಿ.

---

## Schemes for supply of Power to Kanakapura Taluk.

*Q.*—2. **Sri S. KARIAPPA** (Virupakshapura).—

Will the Government be pleased to state :—

(*a*) the names of schemes for supply of power for irrigation pumps in Kanakapura Taluk, both sanctioned and those that are for sanction ;

(*b*) in the case of the schemes that have been sanctioned, the names of those that have been implemented ;

(*c*) the progrees that has been made in execution of the schemes that have been sanctioned ;

(*d*) the steps that have been taken to implement the schemes sanctioned and awaiting further action ?

*A.*—**Sri H. M. CHANNABASAPPA** (Minister for Industries).—

(*a*).—

SANCTIONED SCHEMES.

1. 23 I.P. sets around Kodihalli Village.
2. 19 I.P. sets at Hosadurga.
3. 30 I.P. sets at Hukkunda and Settikeredoddi.

ESTIMATES TO BE SANCTIONED.

1. 26 I.P. sets around Maralavadi Village.

(*b*) Power supply to 23 I.P. sets at Kodihalli is under progress.

(*c*) Poles have been erected.

(*d*) The scheme pertaining to Hosadurga has to be taken up after that of Kodihalli is completed. The applicants have also to send completion reports. In the case of Hukkunda and Settikeredoddi, the required number of applicants have not executed agreements. Notices have been issued to those concerned.

ಶ್ರೀ ಎಸ್. ಕರಿಯಪ್ಪ.—ಈ ಮರಳವಾಡಿ ಗ್ರಾಮದ ಸುತ್ತಮುತ್ತಲ ಸ್ಥಳಗಳಿಗೆ 26 ಐ.ಪಿ. ಸೆಟ್ಟುಗಳನ್ನು ಒದಗಿಸಿದ್ದೀರಿ. ಇವಕ್ಕೆಲ್ಲಾ ದುಡ್ಡು ಕೊಟ್ಟಿದ್ದೀರಾ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ದುಡ್ಡು ಕೊಟ್ಟಿರತಕ್ಕ ವಿಷಯ ಈಗ ನನ್ನ ಮುಂದೆ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಇದು ಈಗ ಯಾವ ಹಂತದಲ್ಲಿ ಇದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಸ್ಟಿಮೇಟ್ ಫೈನಲೈಸ್ ಮಾಡಿ, ತಕ್ಷಣದಲ್ಲೇ ಮಂಜೂರಾತಿಯ ಬಗ್ಗೆ ಕಳುಹಿಸತಕ್ಕ ಸ್ಟೇಜ್‌ನಲ್ಲಿ ಇದೆ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಅತ್ಯಲ್ಪ ಕಾಲದಲ್ಲೇ ಮಂಜೂರಾಗುತ್ತದೆ ಎಂದು ನಿರೀಕ್ಷಿಸಿ ಮಾಡಬಹುದೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಬಂದ ಕೂಡಲೇ ಒಂದು ಸಾವಿರ ರೂಪಾಯಿಗೆ ಒಳಪಟ್ಟ ಬರುವುದಾದರೆ ಮಂಜೂರು ಮಾಡಿಕೊಡಲಾಗುತ್ತದೆ.

---

## Educational Reforms *re* Secondary and Primary Education.

*Q.*—175. **Sri B. P. NAGARAJA MURTHY** (Malavalli).—

Will the Government be pleased to state :—

(*a*) how far the Educational Reforms pertaining to secondary

*Asterisk indicates that the remarks or speeches have not been revised by the Member concerned.